ಕಠಿಣ ಮಾಡಲು ಸಾಧ್ಯ. ಬಡ ಪುರುಷರು ಕೂಡಾ ಅಸಹಾಯಕರೇ. ಬಡ ಮಹಿಳೆಯರ ಸ್ಥಾನ ಅದಕ್ಕಿಂತಲೂ ದುರ್ಬಲವಾದದ್ದು.

ಮೈಕ್ರೊಫೈನಾನ್ಸ್ ಮಹಿಳಾ ಸಬಲೀಕರಣದ ಪರವಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ವಾದ ಒಂದು ಕಡೆಯಾದರೆ, ಸ್ಮಿತಾ ಮತ್ತೆರಡು ವಾದಗಳನ್ನು ಮಂಡಿಸುತ್ತಾರೆ. ಇದರಿಂದಾಗಿ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸರ್ಕಾರದ ಪಾತ್ರ ಕ್ಷೀಣಿಸುತ್ತಿದೆಯೆಂದೂ, ಇರುವ ಬಡವರ ಪರ ಕಾರ್ಯಕ್ರಮಗಳು ಅತಿಯಾಗಿ ವಿತ್ತೀಕರಣವಾಗುತ್ತಿದೆಯೆಂದೂ ವಾದಿಸುತ್ತಾರೆ. ಎರಡರಲ್ಲೂ ಹುರುಳಿದೆ. ಆದರೆ ಈ ಎರಡೂ ವಾದಗಳು ಮಹಿಳಾ ಸಬಲೀಕರಣದ ವಾದಕ್ಕೆ ಸಂಬಂಧಿಸಿದ್ದಲ್ಲ. ಮಾರುಕಟ್ಟೆಗಳು (ಅಥವಾ ಇತರ ಸ್ವಯಂ ಸೇವಾ ಸಂಸ್ಥೆಗಳು) ಸರ್ಕಾರ ಮಾಡಬೇಕಾದ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಶುರುಮಾಡುತ್ತಿದ್ದಂತೆಯೇ ಸರ್ಕಾರಗಳು ಹಿಂದೆ ಸರಿಯುವುದನ್ನು ನಾವು ಕಂಡಿದ್ದೇವೆ. 2008ರ ಜಾಗತಿಕ ಆರ್ಥಿಕ ಬಿಕ್ಕಟ್ಟು ಉದ್ಭವವಾದದ್ದೇ ಇದರಿಂದಾಗಿ. ಬಡವರಿಗೆ ಮಾರುಕಟ್ಟೆಯ ಮೂಲಗಳು ಮನೆ ಕೊಳ್ಳಲು ಸುಲಭ ಸಾಲಗಳನ್ನು ಕೊಡುತ್ತಿದ್ದುದನ್ನು ಕಂಡ ಅಮೆರಿಕದ ಸರ್ಕಾರ, ಬಡವರಿಗೆ ವಸತಿ ಒದಗಿಸುವ ತನ್ನ ಕೆಲಸವನ್ನು ಮಾರುಕಟ್ಟೆಗೆ ವರ್ಗಾಯಿಸಿ, ಪ್ರೋತ್ಸಾಹಿಸಿದ್ದನ್ನು ನಾವು ನೋಡಬಹುದು. ಆದರೆ ಮಾರುಕಟ್ಟೆಗಳಿಗಿರುವ ಅತಿಯಾಸೆ ಮತ್ತು ತಣಿಯದ ಲಾಭದ ಹಸಿವು ಅರ್ಥವ್ಯವಸ್ಥೆಯ ಎಲ್ಲೆ ಮೀರಿದ್ದನ್ನೂ ಕಂಡೆವು. ಭಾರತದಲ್ಲೂ 'ಅಕ್ಷಯ ಪಾತ್ರ'ದಂಥ ಸಂಸ್ಥೆಗಳು ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಪೂರೈಸುತ್ತೇನೆನ್ನುವ ಜವಾಬ್ದಾರಿ ಹೊತ್ತ ಕೂಡಲೇ, ಸರ್ಕಾರಗಳು ಖುಷಿಯಿಂದ ಹಿಂದೆಕ್ಕಡಿಯಿಟ್ಟದ್ದನ್ನು ನಾವು ನೋಡಬಹುದು.

ಮೈಕ್ರೊಫೈನಾನ್ಸ್ ವಿಷಯದಲ್ಲಾದದ್ದೂ ಇದೇ. ಖಾಸಗಿ ಮೈಕ್ರೊಫೈನಾನ್ಸ್ ಸಂಸ್ಥೆಗಳು ಆರ್ಥಿಕ ಒಳಗೊಳ್ಳುವಿಕೆಯ ಮಾತನ್ನು ಆಡುತ್ತಾ ವ್ಯಾಪಾರ ನಡೆಸಿದ ಕೂಡಲೇ, ಅವನ್ನು ಭಾರತೀಯ ರಿಜರ್ವ್ ಬ್ಯಾಂಕೂ, ಭಾರತ ಸರ್ಕಾರವೂ ಪ್ರೋತ್ಸಾಹಿಸಿದ್ದನ್ನು ಕಂಡಿದ್ದೇವೆ. ಮಾರುಕಟ್ಟೆಗಳು ಈ ರೀತಿಯ ವ್ಯಾಪಾರವನ್ನು ಕೈಗೊಂಡರೆ, ಅದು ಲಾಭದಾಯಕವಾಗಿದ್ದರೆ, ಸರ್ಕಾರದ ಕ್ಷೇಮಾಭಿವೃದ್ಧಿಯ ಹೊಣೆ ಅಷ್ಟರಮಟ್ಟಿಗೆ ಕಮ್ಮಿಯಾಗುವುದರಿಂದ ಸರ್ಕಾರ ಇದನ್ನು ಪ್ರೋತ್ಸಾಹಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಬದಿಬದಿಗೇ, ಜನಸ್ನೇಹಿಯಾದ ಸ್ವಸಹಾಯ ಗುಂಪುಗಳ ಆರ್ಥಿಕ ಒಳಗೊಳ್ಳುವಿಕೆಯನ್ನು ಸರ್ಕಾರ ತನ್ನದೇ ಅಜೆಂಡಾಕ್ಕೆ ಸೇರಿಸಿಕೊಂಡದ್ದನ್ನೂ ಕಾಣಬಹುದು. ಅಂದರೆ ಸರ್ಕಾರಗಳು ತಮ್ಮ ಕ್ಷೇಮಾಭಿವೃದ್ಧಿಯ ಜವಾಬ್ದಾರಿಯನ್ನು ಮಾರುಕಟ್ಟೆ ಅಥವಾ ಸ್ವಯಂಸೇವಾ ಸಂಸ್ಥೆಗಳು ಕೈಗೊಂಡ ಕೂಡಲೇ ತನ್ನ ಜವಾಬ್ದಾರಿಯನ್ನು ಹಿಂದಕ್ಕಟ್ಟಿ ಇವುಗಳನ್ನ ಪ್ರೋತ್ಸಾಹಿಸುವುದು ಸಹಜವೇ. ಆಗ ಸರ್ಕಾರಕ್ಕಿರುವ ಆರ್ಥಿಕ ಸಂಪನ್ಮೂಲಗಳನ್ನು ಇತರ ಕ್ಷೇಮಾಭಿವೃದ್ಧಿ ಕಾರ್ಯಗಳತ್ತ ತಿರುಗಿಸಬಹುದು.

ಅದೇ ರೀತಿಯಲ್ಲಿ ವಿತ್ತೀಕರಣದ ಕಥೆಯೂ ಮುಂದುವರೆಯುತ್ತಿದೆ. ಕರ್ನಾಟಕ ಸರ್ಕಾರ 'ಅನ್ನಭಾಗ್ಯ'ದಡಿ ಅಕ್ಕಿಯನ್ನು ಸರಬರಾಜು ಮಾಡಲಾಗದೆ, ಬಡವರ ಖಾತೆಗೆ ದುಡ್ಡನ್ನು ಕಳುಹಿಸುತ್ತಿರುವುದು ವಿತ್ತೀಕರಣದ ಒಂದು ಉದಾಹರಣೆಯಷ್ಟೆ. ಎರಡೂ ವಿಷಯಗಳು ಕ್ಷೇಮಾಭಿವೃದ್ಧಿಯ ದೃಷ್ಟಿಯಿಂದ ಎಷ್ಟು ಅಪೇಕ್ಷಣೀಯ ಎನ್ನುವುದನ್ನು ನಾವು ಚಿಂತಿಸಬೇಕಾಗಿದೆ.

ಸ್ಮಿತಾ ಮಹಿಳೆಯರನ್ನು ಗ್ರಾಹಕರನ್ನಾಗಿ ನೋಡುವುದಲ್ಲದೇ, ಮೈಕ್ರೊಫೈನಾನ್ಸ್ ಸಂಸ್ಥೆಗಳಲ್ಲಿ ಉದ್ಯೋಗಿಗಳಾಗಿ, ಸಂಸ್ಥೆ ನಡೆಸುವ ಉದ್ಯಮಿಗಳಾಗಿ ಕೂಡಾ ಮಹಿಳೆಯರ ಪಾತ್ರವೇನು ಎನ್ನುವುದನ್ನು ಅಧ್ಯಯನ ಮಾಡುತ್ತಾರೆ. ಈ ಎರಡೂ ವಿಭಾಗಗಳಲ್ಲೂ ಮಹಿಳೆಯರ ಪಾತ್ರ ನಗಣ್ಯ ಎಂದೇ ಅವರ ತೀರ್ಮಾನ. ಮಹಿಳಾ ಉದ್ಯಮಿಗಳು ಹೆಚ್ಚಿಗಿಲ್ಲ ಎನ್ನುವುದು ಮೈಕ್ರೊಫೈನಾನ್ಸಿಗೆ ಸೀಮಿತವಾದ ಆಪಾದನೆಯಲ್ಲ. ಒಟ್ಟಾರೆ ಎಲ್ಲ ಕ್ಷೇತ್ರಗಳಲ್ಲೂ ಕಮ್ಮಿ ಸಂಖ್ಯೆಯಲ್ಲೇ ಇದ್ದಾರೆ. ಆದರೆ ಮೈಕ್ರೊಫೈನಾನ್ಸ್‌ನಲ್ಲಿ ಮಹಿಳಾ ಉದ್ಯಮಿಗಳಿಲ್ಲ ಎನ್ನುವುದು ಸರಿಯಾದ ಮಾತಲ್ಲ. ಮೈಕ್ರೊಫೈನಾನ್ಸ್‌ನ ಮೂಲ ಬೀಜ ಬಿತ್ತಿದ್ದೇ ಸೇವಾ ಬ್ಯಾಂಕ್ ನಡೆಸುತ್ತಿದ್ದ ಇಳಾ ಭಟ್. ಜೊತೆಗೆ 'ಮನ್ ದೇಸಿ' ಮಹಿಳಾ ಬ್ಯಾಂಕ್ ನಡೆಸುವ ಚೇತನಾ ಸಿನ್ಹಾ, ಸ್ವತಂತ್ರ ಮೈಕ್ರೊಫೈನಾನ್ಸ್‌ನ